## ವಿವೇಕಾನಂದ ಸ್ಮರಣೆ

# ಸ್ವಾಮಿ ವಿವೇಕಾನಂದರ ಭವ್ಯ ನಿಲುವು

ಸ್ವಾಮಿ ರಾಘವೇಶಾನಂದ



**ಸ್ವಾ**ಮಿ ವಿವೇಕಾನಂದರ ಭವ್ಯ ರೂಪ, ಅವರತ್ತ ನೋಡುವವರ ಮನಸ್ಸನ್ನು ಸುಲಭವಾಗಿ ತನ್ನೆಡೆಗೆ ಆಕರ್ಷಿಸುತ್ತದೆ. ಅವರ ಬಗ್ಗೆ ತಿಳಿದಿರಲಿ, ತಿಳಿಯದೇ ಇರಲಿ, ಎಲ್ಲರೂ ಒಂದು ಕ್ಷಣ ನಿಂತು, ನೋಡಿ, ಆನಂದಿಸಿ, ಕೈಬಾಗಿ ನಮಸ್ಕರಿಸಿ ಹೋಗುವಂತೆ ಮಾಡುತ್ತದೆ ಅವರ ಭವ್ಯ ನಿಲುವು.

ಭಗವಂತನ ಪ್ರತಿರೂಪಗಳಾಗಿ ಧರೆಗೆ ಇಳಿದು ಬರುವ ಅವತಾರ ಪುರುಷರೆಲ್ಲಾ ತಮ್ಮ ಭವ್ಯ ನಿಲುವು ಮತ್ತು ಮಾತುಗಳ ಮೂಲಕ ಜನರ ಮನಸ್ಸಿನ ಮೇಲೆ ಆಳವಾದ ಪ್ರಭಾವ ವನ್ನು ಬೀರುತ್ತಾರೆ. ಆದರೂ ವಿವೇಕಾನಂದರದು ಒಂದು ವಿಶಿಷ್ಟ ಆಕರ್ಷಣೆಯೇ ಸರಿ.

ಅವರ ನಿಲುವು ಮತ್ತು ಅಂಗ ರಚನೆಗಳು ಹೇಗಿದ್ದವು? ಸ್ವಾಮೀಜಿ ಯವರ ಎತ್ತರ ೫ ಅಡಿ, ೮.೫ ಅಂಗುಲ ಇತ್ತು. ಮೈಬಣ್ಣ ಗೋಧಿ ಬಣ್ಣ.

ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ತಿರುವಾಂಕೂರಿಗೆ ಆಗಮಿಸಿದಾಗ, ಪ್ರೊಫೆಸರ್ ಸುಂದರ ರಾಮನ್ ಎಂಬುವವರ ಮನೆಗೆ ಹೋದರು. ಬಾಗಿಲು ತಟ್ಟಿದಾಗ ೧೪ ವರ್ಷದ ಅವರ ಮಗ ಬಾಗಿಲು ತೆರೆದ. ಅವನು ಒಳಗಡೆ ಓಡಿಹೋಗಿ ತನ್ನ ತಂದೆಗೆ ಹೇಳಿದ, "ಬಾಗಿಲಲ್ಲಿ ಮಹಾರಾಜರೊಬ್ಬರು ಬಂದಿದ್ದಾರೆ. ಅವರು ನಿಮ್ಮನ್ನು ನೋಡಬೇಕಂತೆ." ಸುಂದರರಾಮನ್ ನಕ್ಕು ಹೇಳಿದರು, "ಎಂಥ ಮುಗ್ಧನೋ ನೀನು! ನಮ್ಮಂಥವರ ಮನೆಗೆ ಮಹಾರಾಜರು ಹೇಗೆ ತಾನೇ ಬರುತ್ತಾರೆ?" ಬಾಲಕ ಉತ್ತರಿಸಿದ, "ನೀವು ಬಂದು ನೋಡಿ, ನಿಮಗೇ ಗೊತ್ತಾಗುತ್ತದೆ."

ಸ್ವಾಮೀಜಿಯವರೊಡನೆ ಮಾತು ಕತೆಯಾಡಿದ ನಂತರ, ಸುಂದರ ರಾಮನ್ ಮಗನಿಗೆ ಹೇಳಿದರು, "ನಿಸ್ಸಂಶಯವಾಗಿ ಇವರು ಮಹಾ ರಾಜರೇ. ಆದರೆ ಒಂದು ಸಣ್ಣ ಪ್ರದೇಶ ಅಥವಾ ರಾಜ್ಯಕ್ಕಲ್ಲ. ಎಲ್ಲೆಯಿಲ್ಲದ ಅಧ್ಯಾತ್ಮ ಸಾಮ್ರಾಜ್ಯಕ್ಕೇ ಇವರು ಮಹಾರಾಜರು!"

ಸ್ವಾಮೀಜಿ ಹಿಮಾಲಯದಲ್ಲಿ ಸುತ್ತಾಡುತ್ತಿದ್ದಾಗ ಎದುರಾದ ಒಬ್ಬ ದಾರಿಕಾರನು ಅವರನ್ನು ಕಾಣುತ್ತಲೇ ಬೆಚ್ಚಿಬಿದ್ದನಂತೆ. ಅವರು ಯಾರು ಎಂದರಿಯದೆ, "ಶಿವ! ಶಂಭೋ!" ಎಂದು ಸೋಜಿಗದಿಂದ ಉಸುರಿದ ನಂತೆ. ಕಾರಣ? ಅವರದು ಜಟ್ಟಿಯಂತೆ ಹುರಿಗೊಂಡ ಮೈಕಟ್ಟು, ಎತ್ತರದ ನಿಲುವು, ತುಂಬಿದ ತೋಳು, ಅಗಲವಾಗಿರುವ ಹಣೆ. ಆ ನೋಟದ ಮಾಟ, ಆ ಮುಖ ಮುದ್ರೆ, ಚಕ್ರವರ್ತಿಯ ವರ್ಚಸ್ಸು, ಸ್ವಾಮೀಜಿಯವರ ಇಷ್ಟದೈವನಾದ ಶಿವನು, ಅವರ ಹಣೆಯ ಮೇಲೆ, ತನ್ನ ಹೆಸರನ್ನು ಮೂಡಿಸಿದಂತಿತ್ತು.

ಚಿಕಾಗೋ ನಗರದಲ್ಲಿದ್ದಾಗ ಒಬ್ಬ ಸುಂದರ ತರುಣಿ, ಅವರದೇ ಫೋಟೋವನ್ನು ತೋರಿಸಿ, "ಈ ಸುಂದರಾಂಗನನ್ನು ಮದುವೆ ಯಾಗುವಂತೆ ನನಗೆ ಕರುಣಿಸಿರಿ" ಎಂದು ಬೇಡಿದಳು. ಆಜೀವ ಅಖಂಡ ಬ್ರಹ್ಮಚರ್ಯವನ್ನು ಪಾಲಿಸಿದ ಸ್ವಾಮೀಜಿ ಕೋಪಗೊಳ್ಳದೆ, "ಅದೇತಕ್ಕೆ?" ಎಂದು ಕೇಳಿದರು. ಅದಕ್ಕೆ ಅವಳು, " ಜಗದೋದ್ಧಾರಕ ನಾದ ಮಗನನ್ನು ಪಡೆಯಲು" ಎಂದಳು. ತಕ್ಷಣ ಸ್ವಾಮೀಜಿ ಮುಗುಳ್ನಗುತ್ತ ಹೀಗೆ ಹೇಳಿದರು: "ತಾಯಿ, ಅಷ್ಟು ವರುಷ ಕಾಯುವುದೇಕೆ? ಈಗಲೇ ನನ್ನನ್ನು ನಿಮ್ಮ ಮಗನೆಂದು ಸ್ವೀಕರಿಸಿ!"

ಪೂಜ್ಯ ಸ್ವಾಮೀಜಿಯವರು ವಿವೇಕಪ್ರಭ ಪತ್ರಿಕೆಯ ಓದುಗರಿಗೆ ಚಿರಪರಿಚಿತರು. ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರಾದ ಇವರು ಉತ್ತಮ ವಾಗ್ಮಿಗಳು. ಇವರ ಅನೇಕ ಪುಸ್ತಕಗಳು ಪ್ರಕಟವಾಗಿವೆ.

## ಕಮಲಾಕ್ಷ

ಸ್ವಾಮಿ ವಿವೇಕಾನಂದರ ಕಣ್ಣುಗಳು ವಿಶಾಲವಾದುವು; ಎಲ್ಲರನ್ನೂ ತನ್ನೆಡೆಗೆ ಆಕರ್ಷಿಸಿ ಸೆಳೆಯುವಂತಹವು. ಸ್ವಾಮೀಜಿಯವರ ಪ್ರಥಮ ಶಿಷ್ಯರಾದ ಸ್ವಾಮಿ ಸದಾನಂದರು, "ಆ ಕಣ್ಣುಗಳನ್ನು ನೋಡಿಯೇ ನಾನು ಅವರ ಗುಲಾಮನಾದೆ" ಎಂದು ಹೇಳುತ್ತಿದ್ದರು. ಶ್ರೀರಾಮಕೃಷ್ಣರು ಸ್ವಾಮೀಜಿಯವರ ಕಣ್ಣುಗಳು ತಾವರೆ ಹೂವಿನಂತಿವೆ ಎಂದು ಹೇಳುತ್ತ, ಅವರನ್ನು 'ಕಮಲಾಕ್ಷ' ಎಂದು ಕರೆಯುತ್ತಿದ್ದರು. "ಅವನ ಕಣ್ಣುಗಳು ಶುಷ್ಕ ಜ್ಞಾನಿಯ ಕಣ್ಣುಗಳಂತಲ್ಲದೆ, ಭಕ್ತನ ಕರುಣಾಪೂರಿತ ನಯನಗಳಾಗಿವೆ" ಎಂದೂ ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಸ್ವಾಮೀಜಿ ದಕ್ಷಿಣೇಶ್ವರಕ್ಕೆ ಬಂದ ಮೊದಲ ಬಾರಿ ಶ್ರೀರಾಮಕೃಷ್ಣರನ್ನು ಭೇಟಿಮಾಡಿದಾಗ, ತಮ್ಮ ಶ್ರೇಷ್ಠ ಶಿಷ್ಯನ ಆಗಮನವನ್ನು ಹೀಗೆ ವಿವರಿಸುತ್ತಾರೆ: "ನರೇಂದ್ರನು ಪಶ್ಚಿಮದ್ವಾರದಿಂದ ಮಂದಿರವನ್ನು ಪ್ರವೇಶಿಸಿದನು. ಆತನ ಮುಖದಲ್ಲಿ ಒಂದು ವಿಧವಾದ ದಿವ್ಯ ನಿರ್ಲಕ್ಷತೆ ರಂಜಿಸುತ್ತಿತ್ತು. ಬಟ್ಟೆಬರೆಗಳ ಮೇಲೆ ಆತನ ದೃಷ್ಟಿಯಿದ್ದಂತೆ ತೋರಲಿಲ್ಲ. ಇತರರಂತಿಲ್ಲದೆ, ಅಂತರ್ಮುಖಿಯಾಗಿ ಅವನು ಕಂಡುಬಂದನು. ಆತನ ಕಣ್ಣುಗಳು ಧ್ಯಾನಾಸಕ್ತನ ನೇತ್ರಗಳಂತೆ ಅಂತರಂಗವಿಹಾರಿಗಳಾಗಿ ಕಂಡುಬಂದವು."

ದೇವೇಂದ್ರನಾಥ ಠಾಕೂರರು ನರೇಂದ್ರನಿಗೆ ಹೇಳಿದ್ದರು, "ನಿನ್ನ ಕಣ್ಣುಗಳು ಯೋಗಿಯ ಕಣ್ಣುಗಳು" ಎಂದು. ಕ್ರಿಸ್ಟಿನಾ ಆಲ್ಬೆರ್ಸ್ (ಸ್ವಾಮೀಜಿಯ ವಿದೇಶೀ ಭಕ್ತೆ) ಸ್ವಾಮಿ ವಿವೇಕಾನಂದರ ಬಗ್ಗೆ ಹೀಗೆ ಹೇಳುತ್ತಾಳೆ: 'ಓ! ಆ ಕಣ್ಣುಗಳು! ಅವು ಉಲ್ಕೆಗಳ ಹಾಗೆ ಹೊಳೆಯುತ್ತಿದ್ದವು; ಮಿಂಚಿನ ಹಾಗೆ ಅವು ವಿದ್ಯುತ್ ತರಂಗಗಳನ್ನು ಪ್ರಸರಿಸುತ್ತಿದ್ದವು."

ಸ್ವಾಮಿ ವಿರಜಾನಂದರು (ಸ್ವಾಮೀಜಿಯವರ ಸಂನ್ಯಾಸಿ ಶಿಷ್ಯ), "ಸ್ವಾಮೀಜಿಯವರ ಕಣ್ಣುಗಳನ್ನು ನೇರದೃಷ್ಟಿಯಿಂದ ನೋಡುವುದಕ್ಕೇ ನನಗೆ ಭಯವಾಗುತ್ತಿತ್ತು. ಎಲ್ಲಿ ನನ್ನ ಕಣ್ಣುಗಳು ಉರಿದುಹೋಗುವುವೋ ಎಂದೆನಿಸುತ್ತಿತ್ತು" ಎಂದು ಹೇಳುತ್ತಾರೆ. ಸ್ವಾಮೀಜಿಯವರ ಭಾವಚಿತ್ರದಲ್ಲಿ ಅವರ ಕಣ್ಣುಗಳನ್ನು ನೋಡಿದಾಗ, ಅವುಗಳ ಹಿನ್ನೆಲೆಯಲ್ಲಿ ಆಳವಾದ ಸಮುದ್ರದಂತಹ ಪ್ರಶಾಂತತೆ ಇರುವುದು ಸ್ವಲ್ಪ ಮಟ್ಟಿಗಾದರೂ ನಮಗೆ ಅರಿವಾಗುವುದು. ಅವರ ನೋಟ ಲೋಕಾತೀತವಾದಂತಹ ಯಾವುದೊ ಅವ್ಯಕ್ತದೊಡನೆ ಸಂಭಾಷಿಸುತ್ತಿರುವಂತೆ ತೋರುತ್ತದೆ. ಅದೇ ಸಮಯದಲ್ಲಿ ಆ ಸ್ಥಿರನೋಟ, ಕಾರುಣ್ಯದಿಂದ ತುಂಬಿ, ಕೃಪೆಯ ಆಶ್ವಾಸನೆಯನ್ನು ನೀಡುವಂತಹ ಅದ್ಭುತ ಶಕ್ತಿಯನ್ನು ಹೊಂದಿದೆ.

## ಶ್ರೀಚರಣ

ಸ್ವಾಮಿ ವಿವೇಕಾನಂದರ ಪಾದಗಳು, ಬೆರಳುಗಳು ಮತ್ತು ಉಗುರುಗಳು ವಿಭಿನ್ನವಾಗಿದ್ದವು. ವಿಚಾರಮಗ್ನರಾಗಿ ಅವರು ಇತ್ತಿಂದತ್ತ, ಅತ್ತಿಂದಿತ್ತ ನಡೆದಾಡಿದರೆ ಅದು ಸಿಂಹದ ನಡಿಗೆಯಂತಿರುತ್ತಿತ್ತು. ಶಕ್ತಿಸಾಮರ್ಥ್ಯಗಳ ಗಣಿಯಾದ ಸ್ವಾಮೀಜಿಯವರು ಒಂದೊಂದು ಹೆಜ್ಜೆ ಎತ್ತಿ ಇಡುವಾಗಲೂ, ಅವರ ಪಾದದಡಿ ಎಲ್ಲಿ ಭೂಮಿ ನಲುಗಿ ಬಿರಿಯುವುದೋ ಎಂದು ಭಾಸವಾಗುತ್ತಿತ್ತು. ಅವರು ಬಾಲಕನಾಗಿದ್ದಾಗ ಅವರ ಪಾದಗಳನ್ನು ಗಮನಿಸಿದ ಒಬ್ಬ ಜ್ಯೋತಿಷಿ, ಅದರಲ್ಲಿ ಶಂಖ, ಚಕ್ರ, ಗದೆ, ಪದ್ಮ ಮುಂತಾದ ದೈವಿಕ ಚಿಹ್ನೆಗಳಿವೆ ಎಂದಿದ್ದರು; ಅದಲ್ಲದೆ ಅವರಿಗೆ ಉಜ್ವಲ ಭವಿಷ್ಯ ಕಾದಿದೆ ಎಂದೂ ಹೇಳಿದ್ದರು.

## ದಿವ್ಯರೂಪ

ಸ್ವಾಮೀಜಿಯವರ ರೂಪ ದಿವ್ಯ ತೇಜೋಮಯವಾಗಿ ಪ್ರಕಾಶಿಸುತ್ತಿತ್ತು. ಸೌಂದರ್ಯ, ಗಾಂಭೀರ್ಯ, ಶೌರ್ಯ ಇವೆಲ್ಲವನ್ನೂ ಎತ್ತಿ ತೋರುವ ವ್ಯಕ್ತಿತ್ವ ಅವರದಾಗಿತ್ತು. "ಅಧ್ಯಾತ್ಮ ಸಾಮ್ರಾಜ್ಯದ ನೆಪೋಲಿಯನ್‌ನಂತೆ ಅವರು ಕಾಂತಿಯುತರಾಗಿ ಪ್ರಕಾಶಿಸುತ್ತಿದ್ದರು, ಅಭೇದ್ಯ ರಹಸ್ಯಗಳನ್ನು ಭೇದಿಸುವ ಸಾಹಸಕರ ಕಾರ್ಯಗಳಲ್ಲಿ ತೊಡಗುವವರಂತೆ ಸದಾ ಕಾಣುತ್ತಿದ್ದರು" ಎಂದು ಅವರನ್ನು ದರ್ಶಿಸಿದ ಒಬ್ಬರು ಹೇಳಿದ್ದಾರೆ.

## ಕಂಚಿನ ಗಂಟೆಯ ನಿನಾದ

ಸ್ವಾಮೀಜಿಯವರ ವಾಣಿ ಗಂಭೀರವಾಗಿ, ಪಿಸುರಿಲ್ಲದೆ, ಕಂಚಿನ ಗಂಟೆಯ ನಾದದಂತೆ ಮೊಳಗುತ್ತಿತ್ತು ಎಂದು ಅವರ ಮಾತನ್ನು ಕೇಳಿದವರೊಬ್ಬರು ಹೇಳಿದ್ದಾರೆ. ಸ್ವಾಮೀಜಿಯವರ ಮಾತು ಮತ್ತು ವಿಚಾರಧಾರೆಗಳನ್ನು ಅರ್ಥಮಾಡಿಕೊಳ್ಳಲು ಕಷ್ಟವಾದರೂ, "ಅವರ ಉಪನ್ಯಾಸ ಒಂದು ಸಂಗೀತದಂತೆ ಇತ್ತು" ಎಂದು ಒಂದು ವಿದೇಶೀ ಪತ್ರಿಕೆ ಬರೆದಿತ್ತು.

ಫ್ರಾನ್ಸಿನ ಮಹಾಚಿಂತಕನೂ, ಸ್ವಾಮೀಜಿಯ ಜೀವನಚರಿತ್ರಕಾರನೂ ಆದ ರೋಮೇ ರೋಲಾ ಸ್ವಾಮೀಜಿಯವರ ಮಾತುಗಳನ್ನು ಕುರಿತು ಹೀಗೆ ಬರೆಯುತ್ತಾನೆ : "ಅವರ ಮಾತುಗಳು ಮಹಾ ಸಂಗೀತ, ಬೀಥೋವನ್ನನ ಶೈಲಿಯ ಪದಪುಂಜಗಳು, ಹ್ಯಾಂಡೆಲ್ ಮೇಳಗೀತಗಳ ನಡೆಯಂತೆ ಹೃದಯವನ್ನು ಕಲಕುವ ಲಯಗಳು– ಅವರ ಕೃತಿ ಶ್ರೇಣಿಗಳಲ್ಲಿ ಹರಡಿ ಹಂಚಿಹೋಗಿರುವ ಅವರ ಈ ಅಣಿಮುತ್ತುಗಳನ್ನು ಇಂದೂ, ಮೂವತ್ತು ವರುಷಗಳ ಬಳಿಕವೂ, ದೇಹಾದ್ಯಂತ ವಿದ್ಯುಚ್ಛಕ್ತಿಯಿಂದಾದ ರೋಮಾಂಚನದ ಅನುಭವವಾಗದೆ, ನಾನು ಮುಟ್ಟಲು ಸಾಧ್ಯವಾಗುತ್ತಿಲ್ಲ. ಇನ್ನು ಆ ನಾಯಕನ ತುಟಿಗಳಿಂದ ಉದುರಿದಾಗ ಕೇಳುಗರಿಗೆ ಅವು ಎಂತಹ ರೋಮಾಂಚನವನ್ನು, ಎಂತಹ ಪರವಶತೆಯನ್ನು ನೀಡಿರಬೇಕು!"

## ಉಪಸಂಹಾರ

ಸ್ವಾಮೀಜಿಯವರ ಸೋದರ ಸಂನ್ಯಾಸಿಯಾದ ಸ್ವಾಮಿ ಪ್ರೇಮಾನಂದರು, "ಸ್ವಾಮೀಜಿಯವರನ್ನು ನೆನೆಸಿಕೊಂಡರೆ ಸಾಕು, ನಮ್ಮೆಲ್ಲರ ಮೈ ನವಿರೇಳುತ್ತದೆ. ಒಂದು ಪರಮಾನಂದದ ಅನುಭವ ನಮ್ಮೊಳಗೆ ಪ್ರವೇಶಿಸುತ್ತದೆ. ಶಿವನ ಅವತಾರವಾದ ಸ್ವಾಮೀಜಿಯವರಿಗೆ ಜಯವಾಗಲಿ" ಎಂದು ಹೇಳುತ್ತಿದ್ದರು.

ನಾವು ತಿನ್ನುವ ಆಹಾರ ನಮ್ಮ ದೇಹಕ್ಕೆ ಶಕ್ತಿ ನೀಡಿ, ನಮ್ಮನ್ನು ಕಾರ್ಯಪ್ರವೃತ್ತರನ್ನಾಗಿಸುತ್ತದೆ. ಹಾಗೆಯೇ ಈ ಯತಿರಾಜನ ಸ್ಮರಣೆ ಮಾಡಿದರೆ, ಗುಡುಗಿನಂತಹ ಅವರ ವಾಣಿಯನ್ನು ಓದಿದರೆ, ಅವು ನಮ್ಮೊಳಗೆ ಪ್ರವೇಶಿಸಿ, ನಮ್ಮೊಳಗೆ ಹುದುಗಿರುವ ಅಮಿತ ಶಕ್ತಿಯನ್ನು ಹೊಡೆದೆಬ್ಬಿಸಿ, ನಮ್ಮನ್ನು ಶಕ್ತಿಯುತರನ್ನಾಗಿಸುವುದರಲ್ಲಿ ಸಂಶಯವಿಲ್ಲ.